ಆ) ಸದರಿ ವಿಷಯದಲ್ಲಿ ತನಿಖೆ ನಡೆಸಲು ದಿನಾಂಕ ೩-೮-೮೮ರಂದು ವಿಶ್ವವಿದ್ಯಾನಿಲಯದ ಕುಲಪತಿಗಳು ತನಿಖಾ ಸಮಿತಿಯನ್ನು ನೇಮಿಸಿದ್ದರು.

ಇ) ಸಮಿತಿಯ ಸದಸ್ಯರು ಕೆಳಗಿನಂತೆ ಇದ್ದರು.

೧) ಡಾ: ಶ್ರೀಮತಿ. ಸರೋಜಿನಿ ಶಿಂತ್ರಿ (ಅಧ್ಯಕ್ಷರು) ಸ್ನಾತಕೋತ್ತರ ಇಂಗ್ಲೀಷ್ ವಿಭಾಗ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

೨) ಪ್ರೊ. ಎಸ್.ಎಸ್. ಆಲೂರ-(ಸದಸ್ಯರು) ಸ್ನಾತಕೋತ್ತರ ವಿಶ್ವವಿದ್ಯಾನಿಲಯದ ಕಾನೂನು ಪ್ರಾಧ್ಯಾಪಕರು, ಧಾರವಾಡ.

೩) ಪ್ರಿನ್ಸಿಪಾಲ್ : ಅಬ್ದುಲ್ ಕರಿಮ್-(ಸದಸ್ಯರು) ನೆಹರು ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಹುಬ್ಬಳ್ಳಿ.

ಈ) ಸಮಿತಿಯು ದಿನಾಂಕ ೧೩-೮-೮೮ರಂದು ವರದಿಯನ್ನು ಸಲ್ಲಿಸಿದೆ. ವರದಿಯನ್ನು ೨೦-೮-೮೮ರಂದು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ಮುಂದೆ ಇಡಲಾಗಿತ್ತು. ಸಿಂಡಿಕೇಟ್ ಸಭೆಯು ನಿರ್ಧಾರದ ವೇರೆಗೆ ಸದರಿ ವಿದ್ಯಾರ್ಥಿಗಳ ಪ್ರವೇಶಗಳನ್ನು ರದ್ದುಗೊಳಿಸಲಾಗಿದೆ. ಅಲ್ಲದೆ ಅವರ ವಿರುದ್ಧ ಪೋಲೀಸ್ ಫಿರ್ಯಾದಿ ದಾಖಲು ಮಾಡಲಾಗಿದೆ.

ಕರ್ನಾಟಕದ ಅರಣ್ಯ ಇಲಾಖೆಗೆ ಹೊರಗಡೆ ದೇಶದಿಂದ ಮರ ಖರೀದಿ ಅವ್ಯವಹಾರದ ಕುರಿತು

೪೫೦. ಶ್ರೀ ಗೋಪಾಲ್ ಎಂ. ಕಾನಡೆ(ಸಿರ್ಸಿ).--ಮಾನ್ಯ ಕೃಷಿ ಮತ್ತು ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅರಣ್ಯ ಇಲಾಖೆಯವರು ಹೊರಗಡೆ ದೇಶದಿಂದ ಮರಗಳನ್ನು ಖರೀದಿಸಿದ್ದು, ಯಾವ ವರ್ಷದಿಂದ ಹೊರಗಡೆ ದೇಶದ ಮರಗಳನ್ನು ಖರೀದಿಸಲಾಗುತ್ತಿದೆ,

ಆ) ಯಾವ ಯಾವ ಜಾತಿಯ ಮರಗಳನ್ನು ಯಾವ ಯಾವ ದರಗಳಿಂದ ಖರೀದಿಸಲಾಗಿದೆ,

ಇ) ಇದರಿಂದ ಈ ಇಲಾಖೆಗೆ ಬಂದಿರುವ ಲಾಭವೆಷ್ಟು ,

ಈ) ಈ ಮರಗಳನ್ನು ಖರೀದಿಸಿ ರಾಜ್ಯಕ್ಕೆ ತರುವಾಗ ಏನಾದರೂ ಅವ್ಯವಹಾರಗಳು ನಡೆದಿದೆಯೆ? ಹಾಗಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮವೇನು?

ಶ್ರೀ ಬಿ. ರಾಚಯ್ಯ(ಕೃಷಿ ಮತ್ತು ಅರಣ್ಯ ಮಂತ್ರಿಗಳು).—

ಅ) ಅರಣ್ಯ ಇಲಾಖೆ ಆಮದು ಮಾಡುತ್ತಿಲ್ಲ. ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಹೊರದೇಶಗಳಿಂದ ಕಟ್ಟಿಗೆ (ನಾಟಾಗಳನ್ನು) ೧೯೮೮-೮೯ನೇ ಸಾಲಿನಿಂದ ಆಮದು ಮಾಡಿಕೊಂಡಿದೆ.

ಆ)

	ಮರ	ದರ(ಕ್ಯೂಬಿಕ್ ಮೀಟರಿಗೆ)
೧.	ಮರಬಾವ್	ರೂ.
೨.	ಕೆಂಪಾಸ್	೨೯೭೧.೫೦
೩.	ಕೆರುವಿಂಗ್	೨೨೦೭.೪೦
೪.	ಫಿಕ್ಸೆಡ್ ಲೈಟ್ ಹಾರ್ಡ್‌ವುಡ್ಸ್	೧೫೨೮.೨೦

ಇ) ಸುಮಾರು ೪೧೪.೧೪ ಮೀ.ಗಳಷ್ಟು ಮರಗಳನ್ನು ಮಾರಾಟ ಮಾಡಿದ್ದು ಇದರಿಂದ ರೂ. ೨,೦೫.೨೩೨ ಲಾಭ ಗಳಿಸಿದೆ.

ಈ) ಮಂಗಳೂರು ಬಂದರಿನಲ್ಲಿ ನಾಟಾಗಳನ್ನು ಸ್ವೀಕರಿಸುವಾಗ ನಾಟಾಗಳ ಜಾತಿಯಲ್ಲಿ ವ್ಯತ್ಯಾಸ ಮತ್ತು ಅಳತೆಯಲ್ಲಿ ಹೊಂದಾಣಿಕೆ ಇಲ್ಲದ ನ್ಯೂನ್ಯತೆಗಳು ಕಂಡುಬಂದವು. ಈ ನ್ಯೂನ್ಯತೆಗಳನ್ನು ಕೂಡಲೇ ರಫ್ತುಗಾರರೊಡನೆ ಚರ್ಚಿಸಿ ಅವರು ಅದನ್ನು ಸರಿಪಡಿಸಲು ಒಪ್ಪಿ ಸರಿಪಡಿಸುತ್ತಿದ್ದಾರೆ.